ತಾರೀಖು 3ನೆ ಏಪ್ರೆಲ್ 1907.

ನಂ. 9179—ಸ್ಯಾನಿಟರಿ 129-06—10, ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಸ್ಥಳಗಳಿಗೆ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬಂದೊಂದರ ಪಕ್ಕದಲ್ಲಿಯೂ ನಮೂದಿಸಿರುವ ಜಾತ್ರೆ ಮೊದಲಾದ ಕಾಲಗಳಲ್ಲಿ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶ ಕೊಟ್ಟರೆ ಆ ಸ್ಥಳಗಳಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮ್ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ :—

ಜಾತ್ರೆಯ ಹೆಸರು.	ನಡೆಯುವ ಸ್ಥಳ.	ತಾಲ್ಲೂಕು.	ತಾರೀಖು.	
			ಇಂದ.	ಗೆ.
1. ಶ್ರೀ ಅಶ್ವತ್ಥನಾರಾಯಣ ಸ್ವಾಮಿಯವರ ರಥೋತ್ಸವ.	ಮಹಿಷಿ	ತೀರ್ಥಹಳ್ಳಿ	25—4—07	30—4—07
2. ಶ್ರೀ ಹುಚ್ಚರಾಯಸ್ವಾಮಿಯವರ ರಥೋತ್ಸವ.	ಶಿಕಾರಿಪುರ	ಶಿಕಾರಿಪುರ	27—4—07	3—5—07
3. ಬಸವಣ್ಣದೇವರ ರಥೋತ್ಸವ	ಬಸವನಂದಿಹಳ್ಳಿ	ಡಿಟೋ	27—4—07	30—4—07
4. ಶ್ರೀ ಹನುಮಂತದೇವರ ರಥೋತ್ಸವ.	ಮಂಚಿ	ಸೊರಬ	22—4—07	23—4—07
5. ಶ್ರೀ ಆಂಜನೇಯದೇವರ ರಥೋತ್ಸವ.	ಹುರಳಿ	ಡಿಟೋ	28—4—07	

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಶ್ರೀಮ್ ಮಹಾರಾಜರವರ ಸರ್ಕಾರದವರು ಪ್ರತಿ ಒಂದು ಜಾತ್ರೆಯ ಪಕ್ಕದಲ್ಲಿಯೂ ನಮೂದಿಸಿರುವ ತಾರೀಖುಗಳಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಆ ಜಾತ್ರೆಯ ಸ್ಥಳಕ್ಕೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್‌ನಾಮೆಗೆ ವಿರೋಧವಾಗಿ ಮೇಲ್ಕಂಡ ಜಾತ್ರೆಗಳಿಗೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 12ನೆ ಏಪ್ರೆಲ್ 1907.

ನಂ. 9464—ಸ್ಯಾ. 156-06-17, ಕೋಲಾರ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಸ್ಥಳಗಳಿಗೆ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬಂದೊಂದರ ಪಕ್ಕದಲ್ಲಿಯೂ ನಮೂದಿಸಿರುವ ಜಾತ್ರೆ ಮೊದಲಾದ ಕಾಲಗಳಲ್ಲಿ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶ ಕೊಟ್ಟರೆ ಆ ಸ್ಥಳಗಳಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮ್ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡು ಬಂದಿರುವುದರಿಂದ :—

ಜಾತ್ರೆಯ ಹೆಸರು.	ನಡೆಯುವ ಸ್ಥಳ.	ತಾಲ್ಲೂಕು.	ತಾರೀಖು.	
			ಇಂದ	ಗೆ
1. ಶ್ರೀ ವೆಂಕಟರಮಣಸ್ವಾಮಿ ರಥೋತ್ಸವ.	ಚಿಕ್ಕ ತಿರುಪತಿ	ಮಾಲೂರು	20—4—07	29—4—07
2. ವೀರಪ್ಪನ ಜಾತ್ರೆ	ವಾನರಾಸಿ	ಕೋಲಾರ	18—4—07	25—4—07

1897ನೆ ವರ್ಷದ 2ನೆ ನಂಬರ್ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಶ್ರೀಮ್ ಮಹಾರಾಜರವರ ಸರ್ಕಾರದವರು ಪ್ರತಿ ಒಂದು ಜಾತ್ರೆಯ ಪಕ್ಕದಲ್ಲಿಯೂ ನಮೂದಿಸಿರುವ ತಾರೀಖುಗಳಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಆ ಜಾತ್ರೆಯ ಸ್ಥಳಕ್ಕೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್‌ನಾಮೆಗೆ ವಿರೋಧವಾಗಿ ಮೇಲ್ಕಂಡ ಜಾತ್ರೆಗಳಿಗೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 12ನೆ ಏಪ್ರೆಲ್ 1907.

ನಂ. 9466—ಸ್ಯಾ. 170-06-22, ಮೈಸೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಸ್ಥಳಗಳಿಗೆ ಪ್ಲೇಗು ತಗುಲಿರುವ ಪ್ರದೇಶಗಳಿಂದ ಒಂದೊಂದರ ಪಕ್ಕದಲ್ಲಿಯೂ ನಮೂದಿಸಿರುವ ಜಾತ್ರೆ ಮೊದಲಾದ ಕಾಲಗಳಲ್ಲಿ ಬರುವ ಜನರು ಅಲ್ಲಿ ಗುಂಪು

ಸೇರುವುದಕ್ಕೆ ಅವಕಾಶಕೊಟ್ಟರೆ ಆ ಸ್ಥಳಗಳಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ :—

ಜಾತ್ರೆಯ ಹೆಸರು.	ನಡೆಯುವ ಸ್ಥಳ.	ತಾಲ್ಲೂಕು.	ತಾರೀಖು	
			ಇಂದ	ಗೆ
1. ಶ್ರೀ ಬಿಳಿಗಿರಿರಂಗಸ್ವಾಮಿಯವರ ಜಾತ್ರೆ	ಬಿಳಿಗಿರಿ ರಂಗನ್ಬೆಟ್ಟ.	ಎಳಂದೂರು ...	26—4—07	29—4—07
2. ಕನ್ನಂಬಾಡಿ ಅಮ್ಮನವರ ಜಾತ್ರೆ.	ಕನ್ನಂಬಾಡಿ	ಕೃಷ್ಣರಾಜಪೇಟೆ.	17—4—07	25—4—07

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಶ್ರೀಮನ್ ಮಹಾರಾಜರವರ ಸರ್ಕಾರದವರು ಪ್ರತಿ ಒಂದು ಜಾತ್ರೆಯ ಪಕ್ಕದಲ್ಲಿಯೂ ನಮೂದಿಸಿರುವ ತಾರೀಖುಗಳಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಆ ಜಾತ್ರೆಯ ಸ್ಥಳಕ್ಕೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್‌ನಾಮೆಗೆ ವಿರೋಧವಾಗಿ ಮೇಲ್ಕಂಡ ಜಾತ್ರೆಗಳಿಗೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 12ನೆ ಏಪ್ರೆಲ್ 1907.

ನಂ. 9468—ಸ್ಯಾನಿಟೆರಿ-166-06—5, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿ ಪ್ಲೇಗು ತಗುಲಿದ ಪ್ರದೇಶಗಳೆಂದು ಆಗಿಂದಾಗ ಪ್ರಕಟಿಸಲ್ಪಟ್ಟಿದ್ದ ಈ ಕೆಳಗೆ ನಮೂದಿಸಿರುವ ಸ್ಥಳಗಳು ಎರಡು ತಿಂಗಳ ವರೆಗೆ ಜಾಡ್ಯರಹಿತವಾಗಿದ್ದುದರಿಂದ ಅಂಥಾ ಪ್ಲೇಗು ತಗುಲಿದ ಪ್ರದೇಶಗಳ ಪಟ್ಟಿಯಿಂದ ವಜಾ ಮಾಡಲ್ಪಟ್ಟಿವೆ.

ಸ್ಥಳ.	ತಾಲ್ಲೂಕು.
ಮಲ್ಲೇನಹಳ್ಳಿ ...	... ಶಿವಮೊಗ್ಗ
ಎಡೆಹಳ್ಳಿ ...	... ಡಿಟೋ
ಕುಂಸಿ ಟೌನ್ ...	... ಕುಂಸಿ ಸಬ್ ತಾಲ್ಲೂಕು.

ತಾರೀಖು 12ನೆ ಏಪ್ರೆಲ್ 1907.

ನಂ. 9470—ಸ್ಯಾ, 171-06—6, ಕೊಡಗು ಸೀಮೆಯ ಚೀಫ್ ಕಮಿಷನರ ಸೆಕ್ರಟೆರಿಯವರ 1907ನೆ ಇಸವಿಯ ಏಪ್ರೆಲ್ 6ನೆ ತಾರೀಖಿನ 630ನೆ ನಂಬರ್ ಲೆಟರಿನೊಡನೆ ತಲುಪಿದ ಸದರಿ ಚೀಫ್ ಕಮಿಷನರಿಂದ ಕೊಡಲ್ಪಟ್ಟ ಅದೇ 6ನೆ ತಾರೀಖಿನ 45ನೆ ನಂಬರಿನ ಇದರಡಿ ಕಂಡ ಇಸ್ತಿಹಾರ್‌ನಾಮೆಯನ್ನು ಸಮಸ್ತರ ತಿಳಿವಳಿಕೆಯ ಬಗ್ಗೆ ಪುನಃ ಪ್ರಕಟಿಸಿ ಇದೆ :—

ನಂ. 45. ಬೆಂಗಳೂರು, 6ನೆ ಏಪ್ರೆಲ್ 1907.

1897ನೆ ಇಸವಿಯ ಸಾಂಕ್ರಾಮಿಕ ಜಾಡ್ಯಗಳ ಆಕ್ಟಿನ 2ನೆ ಪ್ರಕರಣದ (1)ನೆ ಬಳಿಪ್ರಕರಣದಿಂದ ಕೊಡಲ್ಪಟ್ಟಿ ಅಧಿಕಾರಗಳನ್ನು ಚಲಾಯಿಸುವುದರಲ್ಲಿ ಅಫಿಷಿಯೇಟಿಂಗ್ ಚೀಫ್ ಕಮಿಷನರು, ಪ್ಲೇಗು ತಗುಲಿದ ಯಾವ ಸ್ಥಳದಿಂದಲೂ ಕೊಡಗು ಸೀಮೆಗೆ ಮಾಸಿದ ನಾರು ಬಟ್ಟೆಯನ್ನೂ, ಉಪಯೋಗಿಸಿದ ಹಾಸಿಗೆಯನ್ನೂ (ಪ್ರಯಾಣಿಕರು ತಮ್ಮ ಸ್ವಂತ ಸಾಮಾನಿನಂತೆ ತಮ್ಮ ಜತೆಯಲ್ಲಿ ತೆಗೆದುಕೊಂಡು ಹೋಗುವ ಹಾಸಿಗೆ ಕಿವಾಯಿ), ಹರಕು ಬಟ್ಟೆಗಳು, ಮತ್ತು ಕೆಲಸಕ್ಕೆ ಬರದ ಕಾಗದಗಳನ್ನೂ ತೆಗೆದು ಕೊಂಡು ಬರಕೂಡದೆಂದು ನಿಷೇಧಿಸುತ್ತಾರೆ.

2. ಕೊಡಗು ಸೀಮೆಯಿಂದ ಇಂಡಿಯಾ ದೇಶದ ಇತರ ಯಾವ ಪ್ರದೇಶಕ್ಕಾದರೂ ಮೇಲೆ ಹೇಳಿದ ಯಾವುದಾದರೂ ಸಾಮಾನುಗಳನ್ನು ತೆಗೆದುಕೊಂಡು ಹೋದರೆ, ಅಥವಾ ಕಳುಹಿಸಿದರೆ ಅಥವಾ ಯಾರ ವಿಳಾಸಕ್ಕಾದರೂ ರವಾನಿಸಿದರೆ ಅವುಗಳನ್ನು ಅಂಡಿಗೆಗಳನ್ನಾಗಿ ಕಟ್ಟು ಕಳುಹಿಸಬೇಕು.

ತಾರೀಖು 17ನೆ ಏಪ್ರೆಲ್ 1907.

ನಂ. 9595—ಸ್ಯಾನಿಟೆರಿ (66-06)—42, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಹಾಸನ ಡಿಸ್ಟ್ರಿಕ್ಟಿನಲ್ಲಿ ಪ್ಲೇಗು ತಗುಲಿದ ಪ್ರದೇಶಗಳೆಂದು ಆಗಿಂದಾಗ ಪ್ರಕಟಿಸಲ್ಪಟ್ಟಿದ್ದ ಈ ಕೆಳಗೆ ನಮೂದಿಸಿರುವ ಸ್ಥಳಗಳು ಎರಡು ತಿಂಗಳ ವರಗೆ ಜಾಡ್ಯರಹಿತವಾಗಿದ್ದುದರಿಂದ ಅಂಥಾ ಪ್ಲೇಗು ತಗುಲಿದ ಪ್ರದೇಶಗಳ ಪಟ್ಟಿಯಿಂದ ವಜಾ ಮಾಡಲ್ಪಟ್ಟಿವೆ.

ಸ್ಥಳ.	ತಾಲ್ಲೂಕು.
1. ಹಾಸನ ಟೌನ್ ...	... ಹಾಸನ
2. ಗುಡ್ಡೇನಹಳ್ಳಿ ಕೊಪ್ಪಲು ...	... ಡಿಟೋ
3. ಗಾಣಹಳ್ಳಿ ...	... ಡಿಟೋ
4. ಚೀಕನಹಳ್ಳಿ ...	... ಚೀಲೂರು
5. ಎಲ್ಲೇಶಪುರ ...	... ಹೊಳೆನರಸೀಪುರ
6. ಪಾಳ್ಯಪೇಟೆ ...	... ಆಲೂರು ಸಬ್ ತಾಲ್ಲೂಕು